- 10 -

## ಸಭಾಪಂಗಡವಲ್ಲದ ಕ್ರೈಸ್ತತ್ವ -

# ವಿವರಣೆಯು ಅಗತ್ಯವಿಲ್ಲ

ಪೇತ್ರನ ಪ್ರಸಂಗದಲ್ಲಿ ಪಾಪಗಳ ಪರಿಹಾರ ಇಲ್ಲವೇ ಕ್ಷಮಾಪಣೆಗಾಗಿ (ಅಪೊಸ್ತಲರ ಕೃತ್ಯಗಳು 2:38), ಸ್ವೀಕರಿಸುವ "ಕಾರಣಕ್ಕಾಗಿ" ಬಾಪ್ತಿಸ್ಮವಿರುವುದು ಎಂದು ಪ್ರಕಟಿಸಿದ ಪದವು "unto" ಮತ್ತು "into" ಎಂಬ ಇಂಗ್ಲೀಷ್ ಪದದಂತೆ ಅರ್ಥದಲ್ಲಿ ನಿಶ್ಚಿತವಾದದ್ದೂ ಸಂದೇಹಾಸ್ಪದವಿಲ್ಲದ್ದೂ ಆಗಿರುತ್ತದೆ. ಪೇತ್ರನ ವಿಶಾಲವಾದ ಶ್ರೋತೃ ಸಮೂಹದಲ್ಲಿ, ಅವನು ಮಾನಸಾಂತರ ಮತ್ತು ಬಾಪ್ತಿಸ್ಮದ ಶರತ್ತುಗಳ ಮೇಲೆ ಪಾಪಗಳಿಂದ ರಕ್ಷಣೆಯನ್ನು ಪ್ರಸ್ತಾಪಿಸುತ್ತಿದ್ದಾನೆಂಬುದನ್ನು ಪ್ರತಿಯೊಬ್ಬನೂ ಅರ್ಥಮಾಡಿಕೊಂಡನು. ಅರ್ಥವನ್ನು ಯಾರೊಬ್ಬನೂ ತಪ್ಪಾಗಿ ತಿಳಿದುಕೊಳ್ಳಲಿಲ್ಲ. Eis ಎಂಬ ಪದವು "ಈ ಕಾರಣದಿಂದ" ಇಲ್ಲವೇ "ಇದರ ಗುರುತಿಗಾಗಿ" ಎಂದರ್ಥವಾಗುವಂತೆ - ಪೇತ್ರನು ಮಾಡಿದ್ದು ಅದಕ್ಕೆ ಹೊಸ ಅರ್ಥವನ್ನು ಕೊಡುವದಾಗಿತ್ತು. ಗ್ರೀಕನಿಂದ ಇಲ್ಲವೇ ಇದಕ್ಕೂ ಮೊದಲು ಎಂದು ಕೊಡಲ್ಪಡದ ಅರ್ಥ ಅದಾಗಿತ್ತು. ಆ ವಿಶಾಲವಾದ ಜನ ಸಮೂಹದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಪೇತ್ರನ ಸ್ಪಷ್ಟವಾದ ಪ್ರಸಂಗವನ್ನು ಅರ್ಥಮಾಡಿಕೊಂಡರು; ಯೆರೂಸಲೇಮಿನಲ್ಲಿಯ ಈ ಸಭಾಪಂಗಡತ್ವವಲ್ಲದ ಕೂಟದ ನಂತರ ನೂರಾರು ವರ್ಷಗಳವರೆಗೆ, ಪ್ರಶ್ನಿಸುತ್ತಿದ್ದ ಜನರಿಗೆ ಪೇತ್ರನು ಆ ಎರಡು ಶರತ್ತುಗಳ ಮೇಲೆ ಕ್ಷಮಾಪಣೆಯಿರುವದೆಂದು ಹೇಳಿದ್ದನ್ನು ಯಾವುದೇ ಭಾಷೆಯ ವಿದ್ಯಾರ್ಥಿಯು ನೋಡುವದರಲ್ಲಿ ಸೋತು ಹೋಗಲಿಲ್ಲ ಎಂದು ನಾನು ಭಾವಿಸುತ್ತೇನೆ. ಅನೇಕ ಶತಮಾನಗಳವರೆಗೆ ಭಾಷೆಯ ಪ್ರತಿಯೊಬ್ಬ ಬೋಧಕನು ಹಾಗೆ ಬೋಧಿಸಲ್ಪಟ್ಟನೆಂದು ಒಪ್ಪಿಕೊಳ್ಳುವ ಸಾಹಸ ಮಾಡೋಣ.

ಅಷ್ಟು ವರ್ಷಗಳವರೆಗೆ ಭಾಷೆಗೆ ಒಂದು ಅರ್ಥ ಕೊಟ್ಟ ಸಂಗತಿಯು ವ್ಯಾಖ್ಯಾನವು ಸರಿಯಾಗಿರುವದಕ್ಕೆ ಬಲವಾದ ರುಜುವಾತಾಗಿರುತ್ತದೆ. ಇದರ ನಿಖರತೆಯು ವಿಶೇಷವಾಗಿ ಈ ವ್ಯಾಖ್ಯಾನವು ಇಂದಿನ ಅತ್ಯುತ್ತಮ ಪಂಡಿತರಿಂದ ಕೊಡಲ್ಪಟ್ಟ ಅರ್ಥ ವಿವರಣೆಯೊಂದಿಗೆ ಸಾಮರಸ್ಯದಲ್ಲಿದೆಯೆಂಬ ಸಂಗತಿಯಿಂದ ಬೆಂಬಲಿಸಲ್ಪಟ್ಟಿದೆ. ...

ಒಬ್ಬನು ಒಂದು ಸಭಾಪಂಗಡದ ಸದಸ್ಯನಾಗಿರಬಹುದು ಮತ್ತು ಬೈಬಲಿನ ಈ ತತ್ವವನ್ನು ನಂಬದಿರಬಹುದು, ಬೋಧಿಸದಿರಬಹುದು. ಹಾಗಿದ್ದರೂ ಅವನು ಕೇವಲ ಕ್ರೈಸ್ತನು - ಸಭಾಪಂಗಡತ್ವವಲ್ಲದ ಕ್ರೈಸ್ತನು, ಪೇತ್ರನಂತೆ ಒಬ್ಬ ಕ್ರೈಸ್ತನು - ಆಗಿರಬಹುದೋ ಮತ್ತು ಬೈಬಲ್ ಹೇಳುವದನ್ನು ನಂಬದಿರಬಹುದೋ ಮತ್ತು ಬೋಧಿಸದೇ ಇರಬಹುದೋ?

ಕರ್ತನು ತನ್ನ ಅನುಯಾಯಿಗಳು ಅದನ್ನೇ ಸತ್ಯಗಳನ್ನು ಮಾತಾಡುವದನ್ನೂ ಮತ್ತು ಅವರು ಒಂದೇ ಮನಸ್ಸಿನಲ್ಲಿಯೂ ಒಂದೇ ಅಭಿಪ್ರಾಯದಲ್ಲಿಯೂ ಪರಿಪೂರ್ಣವಾಗಿ ಒಂದಾಗಿ ಇರಬೇಕೆಂಬುದನ್ನೂ ಅಪೇಕ್ಷಿಸುವ ಕಾರಣದಿಂದ, ಯೆರೂಸಲೇಮಿನಲ್ಲಿ ಈ ಕೂಟದ ಕಾರ್ಯವನ್ನು ನಾವು ವಿಚಾರಿಸಿದ್ದೇವೆ. ಯೆರೂಸಲೇಮಿನಲ್ಲಿ ಹೇಳಲ್ಪಟ್ಟ ಈ ಮಹತ್ವದ ಸಂಗತಿಗಳನ್ನು ಕುರಿತು ವಿಭಜನೆಯಾಗುವದಕ್ಕೆ ಯಾವ ಯೋಗ್ಯ ಕಾರಣವೂ ಇರುವದಿಲ್ಲ. ಅವುಗಳ ಮೇಲೆ ನಾವು ಪಕ್ಷಗಳಾಗಿ ವಿಭಾಗವಾದರೆ ಅದಕ್ಕೆ

ನಮ್ಮಲ್ಲಿ ಕ್ಷಮಾಪಣೆಯೇ ಇಲ್ಲ ಮತ್ತು ನಮ್ಮ ಕರ್ತನಿಗೆ ನಾವು ಅಪನಂಬಿಗಸ್ತರಾಗಿದ್ದೇವೆಂಬುದನ್ನು ಅದು ತೋರಿಸುತ್ತದೆ ಪರಲೋಕದಿಂದ ಹೊಸದಾಗಿ, ಪರಿಶುದ್ಧಾತ್ಮನಿಂದ ಮಾರ್ಗದರ್ಶನ ಹೊಂದಿದ, ಪ್ರೇರೇಪಿತ ಅಪೊಸ್ತಲರಿಂದ ನಡಿಸಲ್ಪಟ್ಟ ಈ ಪ್ರಥಮ ಕೂಟದಲ್ಲಿ ಬೋಧಿಸಲ್ಪಟ್ಟಂತೆ ಬಾಪ್ತಿಸ್ಮದ ಉದ್ದೇಶದ ಮೇಲೆ ನಾವು ವಿಶೇಷವಾಗಿ ಗಮನ ಕೊಟ್ಟಿದ್ದೇವೆ, ಯಾಕಂದರೆ, ನಿಜವಾದ, ಯಥಾರ್ಥವಾದ ಹೃದಯಗಳು ಈ ಸ್ಥಳದಲ್ಲಿ ಒಂದು "ಕವಲು ದಾರಿಯನ್ನು" ಮಾಡಿವೆ, ಮತ್ತು ಬೇರೆಯಾಗಿ ಹೋಗಿವೆ. ಇಲ್ಲಿ ವಿಭಾಗವಾಗಲು ಯಾವುದೇ ಬೈಬಲಿನ ಕಾರಣವಿಲ್ಲದಾಗ ವಿಭಜನೆಗಾಗಿ ಬಹುಶಃ ಕೆಲವೊಂದು ಸ್ಪಷ್ಟವಾದ ನೆಪವಿರುತ್ತದೆ.

ಪಾಪಿಗಳಿಗೆ ಯೇಸುವು ಬೋಧಿಸಲ್ಪಡಬೇಕು ಮತ್ತು ಆತನು ಜನರ ರಕ್ಷಕನು, ಅವರಿಗಾಗಿ ಆತನು ಮರಣ ಹೊಂದಿದನು ಮತ್ತು ಪುನಃ ಎದ್ದು ಬಂದನು, ಹಾಗೂ ಅರಸರ ಅರಸನೂ ಕರ್ತರ ಕರ್ತನೂ ಆಗಿ ಆತನು ಉನ್ನತಕ್ಕೇರಿಸಲ್ಪಟ್ಟಿರುವನು ಎಂಬುದನ್ನು ತೋರಿಸಬೇಕು ಎಂದು ಎಲ್ಲಾ ನಿಜವಾದ ಹೃದಯಗಳು ಒಪ್ಪಿಕೊಳ್ಳುತ್ತವೆ. ಕ್ರೂಜಿಸಲ್ಪಟ್ಟ ಹಾಗೂ ಉತ್ಥಾನವಾದ ಕರ್ತನ ಈ ಜ್ಞಾನವು, ರಕ್ಷಿಸಲ್ಪಡದೇ ಇದ್ದ ಹೃದಯಗಳಿಗೆ ಅವರು ಪಾಪಗಳ ಅಪರಾಧ ಅರಿತುಕೊಂಡು, ತಮ್ಮ ತಪ್ಪಿಹೋದ ಸ್ಥಿತಿಯನ್ನು ಅರಿತುಕೊಳ್ಳುವಂತೆ ತಲುಪಬೇಕೆಂದು ನಿಜವಾದ ಹೃದಯವುಳ್ಳವರು ಒಪ್ಪಿಕೊಳ್ಳುತ್ತಾರೆ. ಈ ನಂಬುವ, ಅಪರಾಧ ನಿರ್ಣಯ ಹೊಂದಿದ ಹೃದಯಗಳು ಮಾನಸಾಂತರಪಡಬೇಕು - ಅಂದರೆ, ತಮ್ಮ ಹಿಂದಿನ ಜೀವನ ಶೈಲಿಯನ್ನು ತಿರಸ್ಕರಿಸಬೇಕು, ಪಾಪಗಳಿಂದ ಹಿಂದಿರುಗಿಕೊಳ್ಳಬೇಕು - ಮತ್ತು, ಹೃದಯದ ಪೂರ್ಣ ಉದ್ದೇಶದೊಂದಿಗೆ ಮತ್ತು ಚಿತ್ತದೊಂದಿಗೆ ಯೇಸುವನ್ನು ಕರ್ತನಂತೆ ಹಿಂಬಾಲಿಸಬೇಕು, ಬಾಪ್ತಿಸ್ಮದ ದೈವಿಕ ಅಪ್ಪಣೆಯಲ್ಲಿ ಆತನಿಗೆ ಸಮರ್ಪಿಸಿಕೊಳ್ಳಬೇಕು ಎಂಬುದನ್ನು ನಿಷ್ಠೆಯುಳ್ಳ ಹೃದಯಗಳು ಒಪ್ಪಿಕೊಳ್ಳುತ್ತವೆ. ರಕ್ಷಿಸಲ್ಪಡದೇ ಇರುವವರಿಂದ ಹಿಡಿಯಲ್ಪಟ್ಟ ಈ ನಂಬಿಕೆಯು, ಮಾನಸಾಂತರಕ್ಕೆ ನಡಿಸುವ ದೈವಿಕ ದುಃಖದೊಂದಿಗೆ ಕೂಡಿಕೊಂಡು ರಕ್ಷಣೆಗಾಗಿ ಯೇಸುವಿನ ಮೇಲೆ ಭರವಸೆಯ ಮತ್ತು ವಿಶ್ವಾಸಿಸುವ ಅವಲಂಬಿಸುವಿಕೆಯನ್ನು ಬೆಳಸುತ್ತದೆ ಎಂದೂ ಸಹ ಒಪ್ಪಿಕೊಳ್ಳಲ್ಪಟ್ಟಿದೆ. ಮಾನಸಾಂತರವು, ಯೇಸುವು ಕರ್ತನೂ ಕ್ರಿಸ್ತನೂ ಆಗಿದ್ದಾನೆಂದು "ನಿಶ್ಚಿತವಾಗಿ" ತಿಳಿಯುವದರ ಪರಿಣಾಮವಾಗಿದೆ ಎಂದು ಒಪ್ಪಿಕೊಳ್ಳುವುದಾಗಿದೆ. ಕ್ರಿಸ್ತನ ಜ್ಞಾನದಿಂದ ಉತ್ಪಾದಿಸಲ್ಪಟ್ಟ ದೈವಿಕ ದುಃಖ ಹಾಗೂ ಮಾನಸಾಂತರದ ಮುಖಾಂತರ, ಒಬ್ಬನು ತಂದೆಯಾದ ದೇವರು ಮತ್ತು ಕರ್ತನಾದ ಯೇಸುಕ್ರಿಸ್ತನ ಮೇಲೆ ಅವಲಂಭನೆಯ ಮತ್ತು ವಿಶ್ವಾಸದ ಸ್ಥಿತಿಗೆ ಬರುತ್ತಾನೆ. ಅಂಥವನು "ಕರ್ತನೇ, ನಾನೇನು ಮಾಡಬೇಕು?" (ಅಪೊಸ್ತಲರ ಕೃತ್ಯಗಳು 22:10) ಎಂದು ತಾರ್ಸದ ಸೌಲನು ಹೇಳುವಂತೆ "ಬಿಟ್ಟುಕೊಟ್ಟ" ಆತ್ಮವಾಗಿರುತ್ತಾನೆ. ಈ "ಬಿಟ್ಟು ಕೊಟ್ಟ" ಪಶ್ಚಾತ್ತಾಪದ, ಮುರಿದ ಆತ್ಮವು ನಿಜವಾಗಿಯೂ ಮಾರ್ಪಾಟು ಹೊಂದಿದ ಆತ್ಮವಾಗಿದೆ, ಕರ್ತನು ಬಯಸಿದ ಯಾವುದನ್ನಾದರೂ ಮಾಡಲು ಸಿದ್ಧವಾಗಿದೆ.

ನಾವು ಇನ್ನೂ ಹೆಚ್ಚು ಏನನ್ನು ಹೇಳೋಣ? ನಿಜವಾದ ಹೃದಯಗಳು ಯೇಸುವಿಗೆ ನಿಷ್ಠೆಯಿಂದ ಇರುವಂಥವುಗಳು, ಇಲ್ಲಿಯವರೆಗೆ ಒಪ್ಪಿಕೊಂಡಂಥವುಗಳು, ಬಾಪ್ತಿಸ್ಮದ ವಿಷಯದ ಮೇಲೆ ಪಕ್ಷಗಳಾಗಿ, ಬೇರೆಯಾಗಬೇಕೋ? ಅವರಲ್ಲಿ ವಿಭಜನೆಗಳು ಇರಬಾರದೆಂದು ಯೇಸುವು ಬೇಡಿಕೊಳ್ಳುತ್ತಿರುವಾಗ, ಅವರು ಹೇಗೆ ಮಾಡಬಲ್ಲರು? ಮೇಲೆ ವಿವರಿಸಿದಂಥ ಆತ್ಮಗಳಿಗೆ, ಪೇತ್ರನು ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು

ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ ..." (ಅಪೊಸ್ತಲರ ಕೃತ್ಯಗಳು 2:38ಬಿ). ಸೌಲನು ತನ್ನನ್ನು ತಗ್ಗಿಸಿಕೊಂಡು, ಸಂಪೂರ್ಣವಾಗಿ ತನ್ನನ್ನು ಕರ್ತನಿಗೆ ಸಮರ್ಪಿಸಿಕೊಂಡಾಗ, ಅವನಿಗೆ ಅನನೀಯನು, "ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ಬಾಪ್ತಿಸ್ಮ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅಪೊಸ್ತಲರ ಕೃತ್ಯಗಳು 22:16ಬಿ). ಇತರ "ಬಿಟ್ಟುಕೊಡಲ್ಪಟ್ಟ" ಆತ್ಮಗಳಿಗೆ - ಆತ್ಮಗಳು, ನಂಬಿಕೆಯಿಂದ, ದೈವಿಕ ದುಃಖದಿಂದ, ಮತ್ತು ಮಾನಸಾಂತರದಿಂದ ದೇವರ ಮತ್ತು ಕ್ರಿಸ್ತನ ಮೇಲೆ ಅವಲಂಭನೆಯ ಸ್ಥಿತಿಯೊಳಗೆ ಬಂದಿರುವಿರಿ ಎಂದು ಹೇಳಲು ನಾವು ಸಿದ್ಧರಾಗಿರುವೆವೋ? - ಅಂಥ ಆತ್ಮಗಳಿಗೆ ಪ್ರೇರೇಪಿತ ಬೋಧಕರು ಅದನ್ನೇ ಹೇಳಿದರು ಮತ್ತು ಅದನ್ನು ಅಲ್ಲಿಯೇ ಬಿಟ್ಟರು.

ನಿನ್ನ ಪಕ್ಷವನ್ನು ಕಳೆದುಕೊಳ್ಳುವೆನೆಂಬ ಭಯ ನಿನಗಿರುವುದೋ? ದೇವರ ಜನರೊಂದಿಗಿನ ಐಕ್ಯತೆಗಿಂತ ಹೆಚ್ಚಾಗಿ ನಿನ್ನ ಪಕ್ಷವನ್ನು ಪ್ರೀತಿಸುತ್ತೀಯೋ? ಯೇಸುವನ್ನು ಮೆಚ್ಚಿಸುವದಕ್ಕಿಂತ ಹೆಚ್ಚಾಗಿ ನಿನ್ನ ಪಕ್ಷಕ್ಕೆ ಅಂಟಿಕೊಂಡಿರುವಿಯೋ? ಪಶ್ಚಾತ್ತಾಪಪಟ್ಟ, ಮುರಿದ ಸಮರ್ಪಿಸಲ್ಪಟ್ಟ ವ್ಯಕ್ತಿಗೆ ಬಾಪ್ತಿಸ್ಮಕ್ಕೆ ಸಂಬಂಧಿಸಿ ಅವನ ಕರ್ತವ್ಯವನ್ನು ಕುರಿತ ಪರಿಶುದ್ಧಾತ್ಮನ ಮಾತುಗಳನ್ನೇ ಹೇಳಲು ನಾನು ಸಿದ್ಧನಾಗಿರುವೆನು, ಅವನು ಅದರ ಅರ್ಥ ಮಾಡಿಕೊಳ್ಳುವನೆಂಬುದರ ಬಗ್ಗೆ ಗಂಡಾಂತರ ತೆಗೆದುಕೊಳ್ಳಲು ಸಿದ್ಧನಾಗಿದ್ದೇನೆ. ಅನೇಕ ನೂರಾರು ವರ್ಷಗಳವರೆಗೆ, ನಾವು ತಿಳಿದಿರುವಂತೆ ಒಂದೇ ಒಂದು ಆತ್ಮವೂ ಸೋತುಹೋಗಿರುವದಿಲ್ಲ.

ಸರಳ ಪದಗಳ ಸಮ್ಮಿಶ್ರ ವಿವರಣೆಯ ಮೇಲೆ ಅವಲಂಭಿಸಿರುವ ಸಿದ್ಧಾಂತವನ್ನು ನೀನು ಹಿಡಿದು ಕೊಂಡಿರುವಿಯೋ? ವಿಭಜನೆಗಾಗಿ ಇಲ್ಲಿ ಒಂದೇ ನೆಪವು ಸಭಾಪಂಗಡತ್ವಕ್ಕೆ ಭಕ್ತಿ ತೋರಿಸುವುದು. ಸಭಾಪಂಗಡತ್ವದಲ್ಲಿ ಮತ್ತು ಸಭಾಂಗಡತ್ವದ ಮೂಲಕವಾಗಿ ಕ್ರೈಸ್ತರು ಎಂದೂ ಒಂದಾಗುವದಿಲ್ಲ, ಯೇಸುವು ಎಂದಿಗೂ ಸಂತುಷ್ಟಪಡಿಸಲ್ಪಡುವದಿಲ್ಲ ಮತ್ತು ಆತನ ಪ್ರಾರ್ಥನೆಯು ಎಂದೂ ಉತ್ತರಿಸಲ್ಪಡುವದಿಲ್ಲ. ಎರಡರ ಮಧ್ಯದಲ್ಲಿ ನಾವು ಆಯ್ಕೆಮಾಡತಕ್ಕದ್ದು. "ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ" (ಯೆಹೋಶುವ 24:15ಬಿ). ನಿಷ್ಠೆಯ ಹೃದಯಗಳು ಸಭಾಂಗಡತ್ವವನ್ನು ಬಿಟ್ಟು ಬಿಡತಕ್ಕದ್ದು. ಕ್ರೈಸ್ತನಾಗಿರಲು - ಕೇವಲ ಒಬ್ಬ ಕ್ರೈಸ್ತನಾಗಿರಲು, ಯಾವುದೂ ಹೆಚ್ಚಿಲ್ಲ ಮತ್ತು ಯಾವುದೂ ಕಡಿಮೆಯಿಲ್ಲ - ಮಾನವ ಹೃದಯಗಳ ಮುಂದೆ ಇಡಲ್ಪಟ್ಟಿರುವ ಅತಿ ದೊಡ್ಡ ಅವಕಾಶವಾಗಿದೆ.

© 2009 Truth for Today